
## ಇಲ್ಲೇ ಸ್ವರ್ಗ!

ಭಾಗವತ ಕಥಾ ಪಾರಾಯಣ ಸಮಾಪ್ತಿಯಾದ ಬಳಿಕ ಪಂಡಿತರು, 'ಯಾರ್‍ಯಾರಿಗೆ ಸ್ವರ್ಗಕ್ಕೆ ಹೋಗುವ ಬಯಕೆಯಿದೆ? ಕೈ ಮೇಲೆತ್ತಿ...' ಎಂದು ಹೇಳಿದರು. ಸೊಸೆಯೊಬ್ಬಳನ್ನು ಹೊರತಪಡಿಸಿ ಅತ್ತೆ, ಮಾವ, ಪತಿ, ನಾದಿನಿ ಕೈಯೆತ್ತಿದರು. 'ಯಾಕೆ, ನಿನಗೆ ಸ್ವರ್ಗಕ್ಕೆ ಹೋಗುವ ಬಯಕೆಯಿಲ್ಲವೆ?' ಪಂಡಿತರು ಸೊಸೆಯನ್ನು ವಿಚಾರಿಸಿದರು. ಆಕೆ ನಿರ್ಲಿಪ್ತಳಾಗಿ ಉತ್ತರಿಸಿದಳು, 'ಖಂಡಿತವಾಗಿಯೂ ಇಲ್ಲ ಪಂಡಿತರೆ, ಇವರೆಲ್ಲಾ ಮೇಲೆ ಹೋದರೆ ನನಗಿಲ್ಲೇ ಸ್ವರ್ಗ ದೊರಕುತ್ತದೆ!'

**ರಮಣ್ ಶೆಟ್ಟಿ ರೆಂಜಾಳ್**





## ತೂಕ ಕಡಿಮೆ ಆಯ್ತು

ಹತ್ತು ಮಂದಿ ವೈದ್ಯರು, ಐದು ಮಂದಿ ಎಂಜಿನಿಯರ್‌ಗಳು, ಒಬ್ಬ ಟೀಚರ್ ಹೆಲಿಕ್ಯಾಪ್ಟರ್ ಹಗ್ಗ ಹಿಡಿದು ಏರುತ್ತಿರುತ್ತಾರೆ. 'ತೂಕ ಜಾಸ್ತಿ ಆಗಿದೆ. ಒಬ್ಬರು ಹಗ್ಗ ಬಿಡಬೇಕು' ಎಂದು ಪೈಲಟ್ ಹೇಳಿದ. ಆಗ ಟೀಚರ್ ಹೇಳಿದ, 'ನಾನೇ ಹಗ್ಗ ಬಿಡ್ತೀನಿ. ನಿಮಗೆಲ್ಲಾ ಕಲಿಸಿ ಈ ಮಟ್ಟಕ್ಕೆ ತಂದಿದ್ದು ನಾನೇ. ನಿಮ್ಮ ಭವಿಷ್ಯ ಚೆನ್ನಾಗಿರಬೇಕು. ನಾನೇ ಈ ಕೆಲಸ ಮಾಡ್ತೀನಿ. ಎಲ್ಲರೂ ಒಂದು ಬಾರಿ ಚಪ್ಪಾಳೆ ತಟ್ಟಿ'. ಎಲ್ಲರೂ ಭಾವುಕರಾಗಿ ಚಪ್ಪಾಳೆ ತಟ್ಟಲು ಶುರುಮಾಡಿದರು. ತೂಕ ತಾನಾಗೇ ಕಡಿಮೆ ಆಯ್ತು. ಟೀಚರ್ ಮೇಲೆ ಏರಿದ.

**ವಿ. ಹೇಮಂತಕುಮಾರ**